ದಿನಾಂಕ : 30.11.2022 ಓ.ಎಸ್ ನಂ.331/2016 ರಲ್ಲಿ
ಪಿ.ಡಬ್ಲ್ಯೂ-1(ನಂದಿನಿ)

ವಾದಿಯ ಪರ ಹಾಜರುಪಡಿಸಲಾದ ಮಧ್ಯಂತರ ಅರ್ಜಿ 6 ರಿಂದ 8 ನ್ನು ಪುರಸ್ಕರಿಸಿ, ಮುಂದುವರೆದ ಮುಖ್ಯ ವಿಚಾರಣೆಗೆ ಅವಕಾಶ ನೀಡಲಾಯಿತು.

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ

ದಾವಾ ಸ್ವತ್ತಿಗೆ ಸಂಬಂಧಿಸಿದ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ ಯಥಾ ನಕಲನ್ನು ನಿಪಿ-1, ಸರ್ವೇ ನಂ.107/ಪಿ2 ಕ್ಕೆ ಸಂಬಂಧಿಸಿದ 4 ಪಹಣಿ ಪತ್ರಿಕೆಗಳ ಆನ್‌ಲೈನ್ ಪ್ರತಿಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ-5, ಸರ್ವೇ ನಂ.107/ಪಿ3 ಗೆ ಸಂಬಂಧಿಸಿದ 4 ಪಹಣಿ ಪತ್ರಿಕೆಗಳ ಆನ್‌ಲೈನ್ ಪ್ರತಿಗಳನ್ನು ಕ್ರಮವಾಗಿ ನಿಪಿ-6 ರಿಂದ ನಿಪಿ-9, ಸರ್ವೇ ನಂ.107/ಪಿ3 ರ ಪಹಣಿಯ ಆನ್‌ಲೈನ್ ಪ್ರತಿಯನ್ನು ನಿಪಿ-10, ಸರ್ವೇ ನಂ.107/ಪಿ2 ರ ಪಹಣಿಯ ಆನ್‌ಲೈನ್ ಪ್ರತಿಯನ್ನು ನಿಪಿ-11, ದಾವಾ ಸ್ವತ್ತಿಗೆ ಸಂಬಂಧಿಸಿದ 2 ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಗಳ ಯಥಾ ನಕಲುಗಳನ್ನು ಕ್ರಮವಾಗಿ ನಿಪಿ-12 ಮತ್ತು ನಿಪಿ-13, ಎಂ.ಆರ್ ನಂ.40/2003-04 ನ್ನು ನಿಪಿ-14 ಎಂದು ಗುರುತಿಸಲಾಯಿತು. ದಾವೆಯನ್ನು ಡಿಕ್ರಿ ಮಾಡುವಂತೆ ಕೋರುತ್ತೇನೆ.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ

1 ನೇ ಪ್ರತಿವಾದಿಯ ಪರ ಲಿಖಿತ ಹೇಳಿಕೆ ಸಲ್ಲಿಸದ ಕಾರಣ ಹಾಗೂ ಅವರ ಪರ ವಕೀಲರು ಗೈರು ಹಾಜರಿರುವ ಕಾರಣ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಏಕಪಕ್ಷೀಯವಿರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ದಿನಾಂಕ : 30.11.2022 ಓ.ಎಸ್ ನಂ.331/2016 ರಲ್ಲಿ
ಪಿ.ಡಬ್ಲ್ಯೂ-1(ನಂದಿನಿ)

5 ನೇ ಪ್ರತಿವಾದಿಯ ಪರ ವಕೀಲರ ಮನವಿಯ ಮೇರೆಗೆ ಅವರ ಪರ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.